## ಇಡ್ಲಿಗೆ ಒಗ್ಗರಣೆ ಹಾಕಿ ಉಪ್ಪಿಟ್ಟು..

ಈ 'ಪುಟ್ಟ ಗೌರಿ (ಮಂಗಳ ಗೌರಿ) ಮದುವೆ', 'ಅಗ್ನಿಸಾಕ್ಷಿ', 'ಲಕ್ಷ್ಮೀ ಬಾರಮ್ಮ' ಎಂಬ ಹಳಸಿದ ಇಡ್ಲಿಗಳಿಗೆ ಒಗ್ಗರಣೆ ಹಾಕಿ ಉಪ್ಪಿಟ್ಟು ಮಾಡಿದ್ದು ನಮಗೆ ಇಷ್ಟವಾಗಿಲ್ಲ. ಈ ಧಾರಾವಾಹಿಗಳ ಸಮಯವನ್ನಾದರೂ ಬದಲಾಯಿಸಬಾರದೇ. 'ಕುಲವಧುವಿ'ನ ತರಹ ದಿನದ ಆರಂಭಕ್ಕೆ ಅಥವಾ ದಿನದ ಕೊನೆಗಾದರೂ ಸರಿಯೆ. ನಮ್ಮನೆ ಯುವರಾಣಿ, ಮಿಥುನರಾಶಿಯನ್ನು ನೋಡಿ ರಂಗನಾಯಕಿ, ಸೀತಾ ವಲ್ಲಭ, ಪದ್ಮಾವತಿ ನೋಡಬೇಕೆಂದರೆ ಮೊದಲ ಮೂರು ಧಾರಾವಾಹಿಗಳು 'ಮೊಸರಲ್ಲಿ ಕಲ್ಲು ಸಿಕ್ಕ' ಹಾಗಿದೆ.

ರಬ್ಬರಾದ್ರೂ ತನ್ನ ಶಕ್ತಿ ಇರುವಷ್ಟು ಹಿಗ್ಗುತ್ತದೆ. ಈ ಧಾರಾವಾಹಿಗಳು ಮಾತ್ರ ಆಹಾರ, ಬಣ್ಣ, ರುಚಿ ಇಲ್ಲದೆ ಅಮೀಬಾದಂತೆ ಎತ್ತೆಂದರತ್ತ ಮುಖ ಚಾಚಿ ಹರಿದಾಡುತ್ತಲೆ ಇವೆ. ಈಗಷ್ಟೆ ಆರಂಭವಾಗಿದ್ದ ಧಾರಾವಾಹಿಗಳನ್ನು ಮುಗಿಸಿ ಈ ಧಾರಾವಾಹಿಗಳನ್ನು ಮಾತ್ರ ಆಕೇಶಿಯಾಗಳಂತೆ ಬೆಳೆಸುತ್ತಿರುವುದಾದರೂ ಯಾವ ಪುರುಷಾರ್ಥ ಸಾಧನೆಗಾಗಿ? ವಾಂತಿ ಮಾಡಿಕೊಳ್ಳುವಂತಾಗುತ್ತಿದೆ.

—ರತ್ನಾ ಅಶೋಕ ಗೊರವರ, ಧಾರವಾಡ

## ಒಡಹುಟ್ಟಿದವರೊಡನೆ ದ್ವೇಷ

ಸಾಮಾನ್ಯವಾಗಿ ಅಣ್ಣ ತಮ್ಮಂದಿರು ಆಸ್ತಿಗಾಗಿ ಜಗಳವಾಡಿದರೆ ಹೇಳುವ ಗಾದೆ 'ಹುಟ್ಟುತ್ತಾ ಅಣ್ಣ ತಮ್ಮಂದಿರು, ಬೆಳೆಯುತ್ತಾ ದಾಯಾದಿಗಳು' ಆದರೆ ನಮ್ಮ ಧಾರಾವಾಹಿಗಳಲ್ಲಿ ಅಣ್ಣ ತಮ್ಮಂದಿರ ಬದಲು ಅಕ್ಕತಂಗಿಯರು ದಾಯಾದಿಗಳಂತೆ, ಬದ್ಧ ದ್ವೇಷಿಗಳಂತೆ ಒಳಗೇ ಕತ್ತಿ ಮಸೆಯುತ್ತಾ ಇರುವ ಪಾತ್ರಗಳನ್ನು ಸೃಷ್ಟಿಸಿ ಹೆಣ್ಣು ಕುಲಕ್ಕೇ ಅಪಮಾನ ಮಾಡುತ್ತಿದ್ದಾರೆ. ಇಬ್ಬರಲ್ಲಿ ಒಬ್ಬಳು ಒಳ್ಳೆಯವಳು, ಮತ್ತೊಬ್ಬಳು ಅವಳ ವೈರಿ. ಉದಾಹರಣೆಗೆ ಕಿನ್ನರಿಯಲ್ಲಿನ ಮಣಿ– ಐಶ್ವರ್ಯ, ಕುಲವಧುವಿನ ಧನ್ಯಾ– ವಚನಾ, ಮಿಥುನಾ ರಾಶಿಯ ಸುರಕ್ಷಾ– ರಾಶಿ, ಅಗ್ನಿಸಾಕ್ಷಿಯ ಸನ್ನಿಧಿ– ತನು ಬರೆಯುತ್ತಿದ್ದರೆ ಪಟ್ಟಿ ಬೆಳೆಯುತ್ತದೆ. ಈ ಧಾರಾವಾಹಿಗಳ ಬಾಲಿಷ ತಿರುವುಗಳಿಗೆ ಕೊನೆ ಯಾವಾಗ?

—ಶಾಂತಾ ನಾಗರಾಜ್ ಕೆ. ಬೆಂಗಳೂರು

ವಾರದ ಪತ್ರ

## ಹತ್ತರಲ್ಲಿ ಹನ್ನೊಂದು

ಭಾರೀ ನಿರೀಕ್ಷೆ ಮೂಡಿಸಿದ್ದ 'ಮಗಳು ಜಾನಕಿ' ಧಾರಾವಾಹಿ ಈಗ ಎರಡು ಮದುವೆಯ ಸುತ್ತಲೇ ಗಿರಕಿ ಹೊಡೆಯುತ್ತಿದೆ. ಎಲ್ಲಿ ಮತ್ತೊಂದು 'ಪುಟ್ಟ ಗೌರಿ ಮದುವೆ' ಯಂತೆ ಆಗಿ ಬಿಡುವುದೋ ಎನಿಸುತ್ತಿದೆ. ಜಾನಕಿಯ ಮದುವೆಗೆ ಈಗ ವರ್ಷವಾಗಿದ್ದು ಅವರು ವಿಚ್ಛೇದನ ಪಡೆಯುವ ಮಾತು ಆರಂಭವಾಗಿದೆ. ಇತ್ತ ಕಡೆ ಮಧುಕರನಿಗೆ ಮದುವೆ ದೇವಯಾನಿ ಜತೆಗೋ ಅಥವಾ ಮೈತ್ರಿ ಜತೆಗೊ ಎಂಬ ಜಿಜ್ಞಾಸೆ ಆರಂಭವಾಗುತ್ತಿದೆ.

ಸೀತಾರಾಂರವರು ಕ್ರಿಯೇಟಿವ್ ಆಗಿ ಏನೋ ನೀಡುತ್ತಾರೆ ಎಂದು ಕೊಂಡಿದ್ದವರಿಗೆ ನಿಧಾನವಾಗಿ ನಿರಾಸೆ ಆವರಿಸುತ್ತಿದೆ. ಭಾರ್ಗಿ ಪಾತ್ರ ಮಾತ್ರ ಭರವಸೆ ಮೂಡಿಸುವಷ್ಟು ಸಶಕ್ತವಾಗಿದೆ. ಕಥೆಯನ್ನು ಎಳೆಯದೆ ವೀಕ್ಷಕರಿಗೆ ಕುತೂಹಲ ಮೂಡಿಸುವಂತೆ ಮಾಡಲಿ. ಇಲ್ಲದಿದ್ದರೆ ಇದೂ ಹತ್ತರಲ್ಲಿ ಹನ್ನೊಂದನೆಯದಾಗಿ ಬಿಡುವ ಅಪಾಯವಿದೆ.

—ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

## ಪಾತ್ರಗಳ ಬದಲಾವಣೆಯಲ್ಲಿ...

ಸಾಮಾನ್ಯವಾಗಿ ಯಾವುದೇ ಧಾರಾವಾಹಿಗಳಲ್ಲಿ ಕಾರಣಾಂತರ ಪಾತ್ರಗಳು ಬದಲಾಗುತ್ತಿವೆ. ಅಸಹಜತೆ ಕಂಡು ಬರುತ್ತದೆ. ನಿರ್ದೇಶಕರು ಆ ಸಂದರ್ಭಗಳಲ್ಲಿ ಕಥೆಯ ಪಾತ್ರಗಳಿಗೆ ತಿರುವು ನೀಡಬೇಕು. ವೀಕ್ಷಕರಿಗೂ ಪಾತ್ರಧಾರಿಗಳು ಒಗ್ಗಿ ಹೋಗಿರುತ್ತಾರೆ. ಪಾತ್ರ ಬದಲಾದಾಗ ಹೊಸಬರನ್ನು ಒಪ್ಪಿಕೊಳ್ಳಲು ಹಲವು ದಿನಗಳು ಬೇಕಾಗಬಹುದು. ಈ ನಿಟ್ಟಿನಲ್ಲಿ ಕಲರ್ಸ್‌ನ 'ಮಗಳು ಜಾನಕಿ' ಧಾರಾವಾಹಿಯಲ್ಲಿ ಜಾನಕಿಯ ಅಮ್ಮನ ಪಾತ್ರ ಪ್ರಾರಂಭದಲ್ಲೇ ಬದಲಾಗಿದ್ದಾರೆ. ಈಗ ವಿದೇಶಕ್ಕೆ ತೆರಳಿದ್ದ ಜಾನಕಿಯ ತಂಗಿ ತವರಿಗೆ ಮರಳಿದ ನಂತರ ಬದಲಾಗಿರುವುದು ಸಮಂಜಸವಲ್ಲ.

—ಪೂರ್ಣಿಮಾ ಮೂರ್ತಿ ಬೆಂಗಳೂರು

## ಜೋಡಿ ಹಕ್ಕಿ ಚೆನ್ನಾಗಿತ್ತು

ಜೋಡಿ ಹಕ್ಕಿ ಮೊದಲು ಚೆನ್ನಾಗಿ ಬರುತ್ತಿತ್ತು, ಕುತೂಹಲವಿರುತ್ತಿತ್ತು. ಯಾವಾಗ ನಂದಿತಾಳ ತಂದೆ ಪ್ರವೇಶವಾಯಿತೋ ಅಂದಿನಿಂದ ಕತೆಯ ಸ್ವಾರಸ್ಯವೇ ಹೋದಂತಾಯಿತು. ನಂದಿತಾಳ ತಂದೆ ಇತ್ತೀಚೆಗೆ ಬಂದೇ ಇಲ್ಲ. ಒಬ್ಬರ ಮನೆ ಹಾಳು ಮಾಡಿ ಬೇಸತ್ತು ತನ್ನ ಮಗಳನ್ನು ಕಳಿಸಿರಬೇಕು. ಅವಳೂ ಅದೇ ಮನೆ ಮುರುಕ ಕೆಲಸ ಮಾಡುತ್ತಿದ್ದಾಳೆ. ಈಗ ಅಷ್ಟು ದೊಡ್ಡ ಮನೆಯಲ್ಲಿ ಯಾರೂ ಇಲ್ಲ. ರಾಮನ ತಂದೆ, ಶಾರದಮ್ಮ, ಇಬ್ಬರೇ ಇನ್ನು ಏನೇನು ಆಗುವುದೋ ಗಟ್ಟಿ ಮನಸ್ಸಿನ ಪ್ರೇಕ್ಷಕರು ನೋಡಬೇಕಷ್ಟೆ. ಹೀಗೆ ಕತೆ ಮುಂದುವರಿಸುವುದಾದರೆ ಇಷ್ಟಕ್ಕೆ ಮುಗಿಸುವುದು ಒಳ್ಳೆಯದು.

—ರುಕ್ಮಿಣಿ ಕೃ. ದೇಶಪಾಂಡೆ, ಗೋಕಾಕ

## ಪ್ರೇಕ್ಷಕರೂ ಭಾಗಿಯಾಗಲಿ

ನಾ. ಸೋಮೇಶ್ವರ್ ಅವರು ನಡೆಸಿ ಕೊಡುವ ಚಂದನ ವಾಹಿನಿಯ 'ಥಟ್ ಅಂತ ಹೇಳಿ' ಕಾರ್ಯಕ್ರಮದಲ್ಲಿ ವೀಕ್ಷಕರಿಗೂ ಪ್ರಶ್ನೆ ಕೇಳುವ ಅವಕಾಶವನ್ನು ಕಲ್ಪಿಸಿರುವುದು ಉತ್ತಮ. ಪ್ರಶ್ನೆಗಳಿಗೆ ವಿವರವಾದ ಉತ್ತರಗಳನ್ನು ನೀಡಲಾಗುತ್ತಿದೆ. ನಂದಘಡದಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಎಂಟು ಅಡಿ ಉದ್ದದ ಸಮಾಧಿ, ಕಿಕ್ಕೇರಿಯ ಬೃಹದೇಶ್ವರ ದೇವಸ್ಥಾನ, ಭಾರತೀಯ ಸೈನ್ಯಕ್ಕೆ ಸೇರ್ಪಡೆಯಾಗಿರುವ ಮುಧೋಳ ನಾಯಿ– ಅಂತಹ ಸಂದರ್ಭದಲ್ಲಿ ಫೋಟೊ ತೋರಿಸುವುದು ಒಳ್ಳೆಯದೆಂದು ನನ್ನ ಅನಿಸಿಕೆ.

— ಕೆ.ಎಸ್. ಪ್ರಭಾಕರ ಗುಪ್ತ, ಹಾಸನ

## ಕನ್ನಡದ ಕೊಲೆ

ಕನ್ನಡ ಭಾಷೆಯನ್ನು ಬೆಳೆಸಲು ಭಾಷಾ ಪ್ರಿಯರು ಪ್ರಯತ್ನಿಸುತ್ತಿದ್ದರೆ, ಕೆಲವರು ಭಾಷೆಯ ಕೊಲೆಗೆ ಪ್ರಯತ್ನಿಸುತ್ತಿದ್ದಾರೆ. ಇದರಲ್ಲಿ ದುಃಖದ ಸಂಗತಿ ಎಂದರೆ ಈ ಕೆಲಸವನ್ನು ಕಿರುತೆರೆ ಮಾಡುತ್ತಿರುವುದು. ಸಂಭಾಷಣೆ ಶೀರ್ಷಿಕೆಯ ಬರಹದಲ್ಲೂ ಈ ಕಾರ್ಯ ವ್ಯಾಪಕವಾಗಿ ನಡೆಯುತ್ತಿದೆ. ಒಂದೆರಡು ದಿನಗಳ ಹಿಂದೆ ಕಲರ್ಸ್ ಸಿನಿಮಾ ವಾಹಿನಿಯಲ್ಲಿ ಚಲನಚಿತ್ರದ ಮಧ್ಯೆ ಜಾಹೀರಾತಿಗೆ ಅವಕಾಶ ಕೊಡಬೇಕಾದಾಗ ಪರದೆಯ ಮೇಲೆ 'ಪಿಚ್ಚರ್' ಎಂಬ ಪದ ರಾರಾಜಿಸಿತು. ಇದು ಆಂಗ್ಲ ಭಾಷೆಯ 'ಪಿಕ್ಚರ್' ಎಂದು ಅರ್ಥವಾಗಲು ಸ್ವಲ್ಪ ಸಮಯವೇ ಬೇಕಾಯಿತು.

—ಶ್ರೀನಾಥ್ ಕೊನೇಟಿ, ಬೆಂಗಳೂರು

## ಹಾಸ್ಯಕ್ಕೆ ಅವಮಾನ

ಕಲರ್ಸ್‌ನ ವಾರಾಂತ್ಯದ 'ತಕದಿಮಿತ' ಡಾನ್ಸ್ ಕಾರ್ಯಕ್ರಮದ ಒಂದು ತುಣುಕು ಈ ವಾರದಿಂದ ವೀಕ್ಷಕರಿಗೆ ತೋರಿಸಲಾಗುತ್ತಿದೆ ಅದರಲ್ಲಿ ಒಂದು ತಂಡದವರ ಜೊತೆ ತೀರ್ಪುಗಾರರು ಕೂಡ ಹೆಜ್ಜೆ ಹಾಕುತ್ತಿರುತ್ತಾರೆ. ಅದರಲ್ಲಿ ಹಿರಿಯ ನಟ ರವಿಚಂದ್ರನ್ ಸಹ ಒಬ್ಬರು. ಅವರು ಮುಂದಿರುವ ಮೆಂಟರ್ ಹಿಂಭಾಗಕ್ಕೆ ಕಾಲಿನಿಂದ ಒದೆಯುತ್ತಾರೆ. ಇದು ಖಂಡಿತ ಶೋಭೆ ಅಲ್ಲ. ವೀಕ್ಷಕರು ಇದನ್ನು 'ಹಾಸ್ಯ' ಎಂದು ಪರಿಗಣಿಸುತ್ತಾರೋ ಅಥವಾ ತಿರಸ್ಕರಿಸುತ್ತಾರೋ ಅದು ಅವರಿಗೆ ಸೇರಿದ್ದು. ಆದರೂ ಗೌರವ ಹೊಂದಿರುವ ವ್ಯಕ್ತಿ ಆ ರೀತಿ ಮಾಡಬಾರದಾಗಿತ್ತು.

—ಎನ್.ಎಸ್.ಚಂದ್ರಶೇಖರ್ ಬೆಂಗಳೂರು

## ಒಳ್ಳೆಯ ಅಂತ್ಯ ನೀಡಿ

'ಝೀ' ಕನ್ನಡದ 'ಸುಬ್ಬಲಕ್ಷ್ಮಿ ಸಂಸಾರ' ತನ್ನ ಆಕರ್ಷಣೆ ಕಳೆದುಕೊಂಡು ನೀರಸವಾಗಿದೆ. ಕಥಾನಾಯಕಿ ಸ್ವಂತ ಸಂಪಾದನೆ ಇದ್ದರೂ ಬೇರೆಯವರ ಮನೆಯಲ್ಲಿ ತಿರಸ್ಕಾರಕ್ಕೆ ಗುರಿಯಾಗಿ ಜೀವನ ನಡೆಸುವುದು ಅಸಹಜವಾಗಿದೆ. ಅವಳ ಸ್ವಾವಲಂಬನೆ ಎಲ್ಲಿ ಹೋಯಿತು? ಧಾರಾವಾಹಿಗೆ ಮುಕ್ತಾಯಹಾಡಿ ಒಂದು ಒಳ್ಳೆಯ ಸಂದೇಶ ಸಮಾಜಕ್ಕೆ ನೀಡಿ.

—ಮುಕ್ತಾ ಸಿ.ಎನ್.